ಗೆಳೆತನಕ್ಕೆ ಕೈಚಾಚಿದ ಹುಡುಗಿಯನ್ನು ಇನ್ನಿಲ್ಲದಂತೆ ನಂಬಿದವ ಸಾಫ್ಟ್‌ವೇರ್ ಎಂಜಿನಿಯರ್ ಅನಂತರಾಮ. ಪರಿಚಯವಾದ ಕೆಲವೇ ದಿನಗಳಲ್ಲಿ ಅನಂತೂನನ್ನು ಮನಸಾರೆ ಮೆಚ್ಚಿಕೊಂಡ ರಾಧಾ, 'ನಿನಗಾಗಿ ನನ್ನ ಏಳು ಜನುಮಗಳೂ ಮುಡಿಪು' ಎಂದಿದ್ದೇ ತಡ, ಹುಡುಗನ ಮನದೊಳಗೆ ಅನುರಾಗ ಮೂಡಿಯೇಬಿಟ್ಟಿತು. 'ನೀನಿಲ್ಲದೇ ಬಾಳಲಾರೆ, ನಿನ್ನೊಂದಿಗೇ ನನ್ನ ಬದುಕ ಬಂಡಿ ಸಾಗಬೇಕು' ಎಂದಾಗಲಂತೂ ಆತ ಅಕ್ಷರಶಃ ಅನುರಾಗದ ಅಮಲಿನಲ್ಲಿ ಕಳೆದುಹೋದ. ಇನ್ನೇನು ಆತ ತಾ ಬೀಸಿದ ಬಲೆಯ ಆಳಕ್ಕೆ ಇಳಿದು ಬಿಟ್ಟ ಎಂದು ಗೊತ್ತಾಗಿದ್ದೇ ಯುವತಿ, 'ತಾಯಿಗೆ ಹುಷಾರಿಲ್ಲ' ಅಂತ ಕತೆ ಕಟ್ಟಿದಳು. ಒಲವಿನ ಗೆಳತಿಗಾಗಿ ಇಷ್ಟೂ ಮಾಡದೇ ಇರಲಾದೀತೆ... ಲಕ್ಷ ಲಕ್ಷ ರೂಪಾಯಿಗಳನ್ನು ಅವಳು ಕೇಳಿದಾಗ, ಕೇಳಿದಂತೆ ತಲುಪಿಸಿದ. ಸಂಶಯ ಬಂದಾಗ ಫೇಸ್‌ಬುಕ್‌ನ ಆಳಕ್ಕಿಳಿದು ಕಂಡುಕೊಂಡ ಸತ್ಯ ಬಹಳ ಕಹಿಯಾಗಿತ್ತು. ಅಷ್ಟೊತ್ತಿಗೆ ಹುಡುಗ ಒಂದಲ್ಲ ಎರಡಲ್ಲ 13 ಲಕ್ಷ ರೂಪಾಯಿ ಕಳೆದುಕೊಂಡಿದ್ದ!

## ಇನ್ನೊಂದು ದುರಂತ ಕಥೆ

ಅಪರಿಚಿತ ಫ್ರೆಂಡ್ ರಿಕ್ವೆಸ್ಟ್‌ಗಳನ್ನು ಒಂದೊಂದಾಗಿ ಡಿಲೀಟ್ ಮಾಡುತ್ತ ಹೊರಟವಳ ಬೆರಳು ಆ ಭಾವಚಿತ್ರದ ಮೇಲೆ ಗಕ್ಕನೇ ನಿಂತುಬಿಟ್ಟವು. ಪ್ರೊಫೈಲ್‌ಗೆ ವಿಜಿಟ್ ಮಾಡಿದಾಗ ಆಸಕ್ತಿ ಉಂಟಾಯಿತು. ಹಾಬಿಗೆ ಹಾಡುತ್ತಾನೆ, ವಯಲಿನ್ ನುಡಿಸ್ತಾನೆ, ಅಪರೂಪಕ್ಕೆ ಅಡುಗೆ ಮಾಡುತ್ತಾನೆ. ಪ್ರತಿಷ್ಠಿತ ಕಂಪನಿಯಲ್ಲಿ ಎಚ್.ಆರ್. ಮ್ಯಾನೇಜರ್ – ಇಷ್ಟು ಸಾಕೆನಿಸಿತು ಅವನನ್ನು ನಂಬಲು.

ಬೆಂಗಳೂರಿನ ಪಿ.ಜಿ. ಒಂದರಲ್ಲಿ ಉಳಿದುಕೊಂಡಿದ್ದ ಯುವತಿಯೂ ಉದ್ಯೋಗಸ್ಥೆ. ಬಹಳ ಬೇಗ ಇಬ್ಬರ ನಡುವಿನ ಅಂತರ ಸವೆಯಿತು. ಅವನು ಹೇಳುವ ಪೋಲಿ ಜೋಕುಗಳಿಗೆ ಅವಳೆದೆಯಲ್ಲಿ ವೀಣೆ ನುಡಿಸಿದ ಅನುಭವವಾಗುತ್ತಿತ್ತು. ಅವನು ಪಿಸುಗುಟ್ಟುವ ರಸಿಕ ಮಾತುಗಳಿಗೆ ಅವಳು ಬೆವೆತುಹೋದಳು. ಎಷ್ಟು ದಿನ ಪರದೆಯ ಮೇಲೆ ಸಲ್ಲಾಪ... 'ಭೇಟಿ ಆಗೋಣ' ಎಂದನಾತ. ಅವಳೂ ಒಪ್ಪಿದಳು. ಅದು ಬರೀ ಭೇಟಿಯಾಗಿ ಉಳಿಯಲಿಲ್ಲ. ಇಷ್ಟಾದ ಮೇಲೂ ಅನುಮಾನ ಹುಟ್ಟಲಿಲ್ಲ ಅವಳಿಗೆ. ಕೇಳಿದಾಗೆಲ್ಲ ಹಣ ಕೊಟ್ಟಳು. ಪಡೆದ ಹಣವನ್ನು ಹಿಂದಿರುಗಿಸುವ ನೆಪದಲ್ಲಿ ಮತ್ತೆ ಮತ್ತೆ ಅವಳೆದೆಯ ಮೇಲೆ

## ಬದುಕು ಬದಲಿಸಿದ ಫೇಸ್‌ಬುಕ್

ಅವನದು ಹಾವೇರಿ. ಅವಳದು ತುಮಕೂರಿನ ಕಡೂರು. ಫ್ರೆಂಡ್ ರಿಕ್ವೆಸ್ಟ್‌ಗಳನ್ನು ನೋಡುತ್ತ ಹೋದವಳಿಗೆ ಅವನ ಮುಖದ ಕಳೆ ನೋಡಿ ಕೆಟ್ಟವನೇನಲ್ಲ ಎನಿಸಿ ಒಪ್ಪಿಕೊಂಡಳು. ಸ್ನೇಹ ಬೆಳೆಯಿತು. ಕನ್ಯೆ ನೋಡಲೆಂದು ತುಮಕೂರಿಗೆ ಬಂದಿದ್ದ. ಆ ಹುಡುಗಿ ಇವನನ್ನು ತಿರಸ್ಕರಿಸಿದಳು. ಅವನು ಫೇಸ್‌ಬುಕ್ ಗೆಳತಿಯನ್ನು ಕಂಡು, ಅದೇ ಬೇಸರ ತೋಡಿಕೊಂಡ. ಅವನ ಬಲಗಾಲಿಗೆ ಸ್ವಾಧೀನವೇ ಇಲ್ಲ ಎಂಬ ಸತ್ಯ ತಿಳಿದ ಅದೇ ದಿನ, ಅವನ ಕೈ ಮೇಲೆ ಕೈ ಇಟ್ಟು, 'ನಿನ್ನೊಂದಿಗೆ ನಾನಿರುತ್ತೇನೆ, ಜೀವನ ಪೂರ್ತಿ ನಿನ್ನ ಬಾಳಗೆಳತಿಯಾಗಿ' ಎಂದ ಅವಳ ಮಾತಿಗೆ ಅವನ ಕಣ್ಣಲ್ಲಿ ಆನಂದಭಾಷ್ಪ.

ಹುಟ್ಟುತ್ತಲೇ ತಾಯಿಯನ್ನು ಕಳೆದುಕೊಂಡ ಹುಡುಗಿ, ಕಾಲಿನ ಸ್ವಾಧೀನ ಕಳೆದುಕೊಂಡ ಹುಡುಗನದು ಒಲವಿನ ದೋಣಿಯಲ್ಲಿ ಸಹಪಯಣ.

